ಕುಡಿಯುವ ನೀರಿನ ಯೋಜನೆ

182(279) **ಶ್ರೀ ತುಕಾರಾಮ್ ಎ. (ಸಂಡೂರ್)** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಸಂಡೂರು ತಾಲ್ಲೂಕಿನ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಗಳು ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ (NRDWP) ಅಡಿಯಲ್ಲಿ ಅನುಮೋದನೆಗೊಂಡಿದ್ದು, ಡೀಟೇಲ್ಡ್ ಸರ್ವೇ ರಿಪೋರ್ಟ್ (DSR) ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರ ಡೀಟೇಲ್ಡ್ ಸರ್ವೇ ವರದಿಯನ್ನು ಯಾವಾಗ ಸಿದ್ಧಪಡಿಸಲಿದೆ, ಟೆಂಡರ್ ಪ್ರಕ್ರಿಯೆಗೆ ಎಂದಿನಿಂದ ಚಾಲನೆ ನೀಡಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

(ಅ) ಬಂದಿದೆ ;

(ಆ) 1. ಸಂಡೂರು ತಾಲ್ಲೂಕಿನ ನಿಡಗುರ್ತಿ ಮತ್ತು ಇತರೆ 22 ಗ್ರಾಮಗಳು (ಮಾರ್ಗ ಮಧ್ಯದ 25 ಗ್ರಾಮಗಳು), 2. ಕೊಡ್ಯಾಲ್ ಮತ್ತು ಇತರೆ 8 ಗ್ರಾಮಗಳು (ಮಾರ್ಗ ಮಧ್ಯದ 5 ಗ್ರಾಮಗಳು) ಮತ್ತು 3. ತಾರಾನಗರ ಮತ್ತು ಇತರೆ 7 ಗ್ರಾಮಗಳ ಕುಡಿಯುವ ನೀರಿನ ಯೋಜನೆಯ (PSR) ಪ್ರಾಥಮಿಕ ಸಮೀಕ್ಷಾ ವರದಿ ಮಾತ್ರ ತಯಾರಾಗಿದ್ದು, ತಾಂತ್ರಿಕ ಪರಿಶೀಲನೆಯಲ್ಲಿದೆ. ಅನುದಾನ ಲಭ್ಯತೆ, ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವ ಆಧರಿಸಿ, ಇವುಗಳ ಅನುಷ್ಠಾನ ಕುರಿತು SLSSC ಸಭೆ ನಿರ್ಧರಿಸಲಿದೆ.

ರಾಜ್ಯದ ಮಹಾವಿದ್ಯಾಲಯಗಳಲ್ಲಿ ಪಿ.ಜಿ. ಕೋರ್ಸುಗಳ ಪ್ರಾರಂಭ

184(347) **ಶ್ರೀ ಯಾವಗಲ್ ಬಿ.ಆರ್ (ನರಗುಂದ)** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದ ಕೆಲವು ಮಹಾ ವಿದ್ಯಾಲಯಗಳಲ್ಲಿ ಪಿ.ಜಿ. ಕೋರ್ಸುಗಳನ್ನು ಪ್ರಾರಂಭ ಮಾಡಲಾಗಿದ್ದು, ಈವರೆವಿಗೂ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಹುದ್ದೆಗಳು ಮಂಜೂರಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;